
ನಿವೇದನೆ

# ನೀರಿಗೆ ಕೊರತೆಯಿದ್ದಾಗ ಬೆಂಕಿಯೊಂದಿಗೆ ಸರಸವೆ?

ನೀರಿನ ಕೊರತೆಯಿರುವ ಸಂದರ್ಭದಲ್ಲಿ ಬೆಂಕಿ ಹಾಕುವುದರಿಂದ ಸಂಕಷ್ಟ ಬಿಗಡಾಯಿಸುವುದೇ ಹೊರತು, ತಿಳಿಗೊಳ್ಳುವುದಿಲ್ಲ. ಬಂದ್‌ಗಳಿಂದ ಸಮಸ್ಯೆ ಬಗೆಹರಿಯುವುದಿದ್ದರೆ, ಅದರಿಂದಾಗುವ ಸಮಸ್ಯೆಗಳನ್ನು ನಿರ್ಲಕ್ಷಿಸಬಹುದು. ಬಂದ್ ನಮ್ಮ ಸಿಟ್ಟಿನ ಅಭಿವ್ಯಕ್ತಿಯಾಗಬಹುದೇ ಹೊರತು, ಸಮಸ್ಯೆಗೆ ಉತ್ತರವಾಗುವುದಿಲ್ಲ.


ಈಶ್ವರ್

ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ವಿರೋಧಿಸಿ ಕಳೆದ ವಾರ ಕರ್ನಾಟಕ ಬಂದ್ ನಡೆದಿದೆ. ಈ ಬಂದ್‌ಗೆ ಎರಡು ದಿನಗಳ ಮೊದಲಷ್ಟೇ ಬೆಂಗಳೂರು ಬಂದ್ ನಡೆದಿದೆ. ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾದಾಗ ದೊಡ್ಡ ಮಟ್ಟದ ಪ್ರತಿಭಟನೆಗಳು ಎದುರಾಗುವುದು ಸಹಜ. ರಾಜ್ಯದ ಜಲಾಶಯಗಳಲ್ಲಿ ನೀರಿನ ಸಂಗ್ರಹ ಬಡವಾಗಿರುವಾಗ, ಪಕ್ಕದ ರಾಜ್ಯಕ್ಕೆ ನೀರು ಹರಿಸಬೇಕಾದ ಅನಿವಾರ್ಯ ಸಂದರ್ಭದಲ್ಲಿ ಸಂಕಟ ಕಿಚ್ಚಾಗಿ ಬದಲಾಗುವುದೂ ಸಹಜ. ಆದರೆ, ಈ ಕಿಚ್ಚು ಹಾಗೂ ಪ್ರತಿಭಟನೆಗೆ ತೆರಬೇಕಾದ ಬೆಲೆಯೆಷ್ಟು?

‘ಬೆಂಗಳೂರು ಬಂದ್’ನಿಂದಾಗಿ ರಾಜ್ಯ ಒಂದರಿಂದ ಎರಡು ಸಾವಿರ ಕೋಟಿ ರೂಪಾಯಿಗಳ ನಷ್ಟ ಅನುಭವಿಸಿತು ಎಂದು ಗೃಹ ಸಚಿವರು ಹೇಳಿದ್ದಾರೆ. ಈ ನಷ್ಟ ಕರ್ನಾಟಕ ಬಂದ್ ಸಮಯದಲ್ಲಿ ಮತ್ತಷ್ಟು ಹೆಚ್ಚಾಗಿರುತ್ತದೆ. ಆದರೆ, ಲೆಕ್ಕಕ್ಕೆ ಸಿಗದ ಸಂಕಟಗಳೂ ಸಾಕಷ್ಟಿರುತ್ತವೆ. ದಿನದ ದುಡಿಮೆಯನ್ನು ನೆಚ್ಚಿಕೊಂಡವರು ಬಂದ್ ಕಾರಣದಿಂದಾಗಿ ಅನುಭವಿಸಿದ ಸಂಕಟಕ್ಕೆ ಹೇಗೆ ಬೆಲೆ ಕಟ್ಟುವುದು? ಊಟಕ್ಕಾಗಿ ಹೋಟೆಲ್‌ಗಳನ್ನು ಅಥವಾ ಹಾದಿಬದಿಯ ತಳ್ಳುಗಾಡಿಗಳಲ್ಲಿನ ಆಹಾರವನ್ನು ನೆಚ್ಚಿಕೊಂಡ ಶ್ರಮಿಕ ವರ್ಗ, ಬಂದ್ ದಿನ ಅರೆಹೊಟ್ಟೆಯಲ್ಲೋ ಬರಿಹೊಟ್ಟೆಯಲ್ಲೋ ಇದ್ದಿರಬಹುದು; ಆ ತಳಮಳವನ್ನು ಹೇಗೆ ಅಂದಾಜು ಮಾಡುವುದು? ನಷ್ಟದ ಲೆಕ್ಕಾಚಾರಗಳಲ್ಲಿ ದನಿಯಿಲ್ಲದವರ ಸಂಕಟಗಳು ಸ್ಥಾನಪಡೆಯುವುದು ಕಡಿಮೆ.

ನೀರಿನ ಕೊರತೆಯಿರುವ ಸಂದರ್ಭದಲ್ಲಿ ಬೆಂಕಿ ಹಾಕುವುದರಿಂದ ಸಂಕಷ್ಟ ಮತ್ತಷ್ಟು ಬಿಗಡಾಯಿಸುವುದೇ ಹೊರತು, ತಿಳಿಗೊಳ್ಳುವುದಿಲ್ಲ ಎನ್ನುವ ತಿಳಿವಳಿಕೆ ನಮಗೆ ಅಗತ್ಯ. ಬಂದ್‌ಗಳಿಂದ ಸಮಸ್ಯೆ ಬಗೆಹರಿಯುವುದಿದ್ದರೆ, ಅದರಿಂದಾಗುವ ಸಮಸ್ಯೆಗಳನ್ನು ನಿರ್ಲಕ್ಷಿಸಬಹುದು. ಆದರೆ, ಬಂದ್ ನಮ್ಮ ಸಿಟ್ಟಿನ ಅಭಿವ್ಯಕ್ತಿಯಾಗಬಹುದೇ ಹೊರತು, ಸಮಸ್ಯೆಗೆ ಉತ್ತರವಾಗುವುದಿಲ್ಲ. ಸಿಟ್ಟು ರಟ್ಟೆಗೆ ಬಂದ ಸಂದರ್ಭದಲ್ಲಿ ಆಗುವ ಅನಾಹುತಗಳು ಸ್ವಹಿಂಸೆಯೇ ಸರಿ. ಹಾಗಾದರೆ, ನಮ್ಮ ಹಿತಾಸಕ್ತಿಗೆ ಧಕ್ಕೆಯುಂಟಾದಾಗ ಏನು ಮಾಡಬೇಕು? ಈ ಪ್ರಶ್ನೆಗೆ ಉತ್ತರ– ಪ್ರತಿಭಟನೆ ಅಗತ್ಯ, ಆದರೆ ಅದರ ಸ್ವರೂಪ ಬದಲಾಗಬೇಕಾಗಿದೆ ಎನ್ನುವುದಾಗಿದೆ. ನೀರಿಗಾಗಿನ ನಮ್ಮ ಹೋರಾಟ ಕಾವೇರಿದ ಸ್ಥಿತಿಯಲ್ಲಿ ನಡೆಯುವುದಕ್ಕಿಂತಲೂ, ಸಾವಧಾನ ಮತ್ತು ವಿವೇಕದ ನೆಲೆಗಟ್ಟಿನಲ್ಲಿ ನಡೆಯುವುದರಿಂದ ಹೆಚ್ಚು ಲಾಭವಿದೆ. ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಕಾನೂನು ಮಾರ್ಗದಲ್ಲಿ ನಮ್ಮ ಹಿತಾಸಕ್ತಿ ರಕ್ಷಿಸಿಕೊಳ್ಳುವ ದಾರಿಗಳನ್ನು ಚಳವಳಿಕಾರರು ಕಂಡುಕೊಳ್ಳಬೇಕು.

ಮಾಹಿತಿ ತಂತ್ರಜ್ಞಾನ ಯುಗದಲ್ಲಿ, ಆನ್‌ಲೈನ್ ಮಾಧ್ಯಮವನ್ನು ಪ್ರತಿಭಟನೆಯ ರೂಪದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡಿರುವ ಉದಾಹರಣೆಗಳು ಸಾಕಷ್ಟಿವೆ. ಈ ಸಾಧ್ಯತೆಯನ್ನು ನಾವೂ ಬಳಸಿಕೊಳ್ಳಬಹುದು. ಕಾವೇರಿ ನೀರು ಹಂಚಿಕೆ ವಿಷಯದಲ್ಲಿ ಕರ್ನಾಟಕಕ್ಕಾಗಿರುವ ಅನ್ಯಾಯವನ್ನು ತರ್ಕಬದ್ಧವಾಗಿ ಜಗಜ್ಜಾಹೀರುಗೊಳಿಸಲಿಕ್ಕೆ ಆನ್‌ಲೈನ್ ಮಾಧ್ಯಮ ಅತ್ಯಂತ ಪರಿಣಾಮಕಾರಿ. ನೀರಿನ ಹಂಚಿಕೆಗೆ ಸಂಬಂಧಿಸಿದ ನಮ್ಮ ಕಾನೂನು ಹೋರಾಟಗಳು ವಿಫಲವಾಗುತ್ತಿರುವುದಕ್ಕೆ ಕಾರಣಗಳನ್ನು ಕಂಡುಕೊಳ್ಳಬೇಕು ಹಾಗೂ ಆ ಲೋಪಗಳನ್ನು ವಿಳಂಬವಿಲ್ಲದೆ ಸರಿಪಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಚಳವಳಿಕಾರರು ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಬೇಕು.

ನಾಡುನುಡಿ ಹಿತಾಸಕ್ತಿ ರಕ್ಷಣೆಗೆ ಸಂಬಂಧಿಸಿದಂತೆ ಬಹಳ ಮುಖ್ಯವಾದುದು ರಾಜಕೀಯ ಇಚ್ಛಾಶಕ್ತಿ. ಆ ಇಚ್ಛಾಶಕ್ತಿ ನಮ್ಮ ರಾಜಕಾರಣಿಗಳಿಗಿಲ್ಲ ಎನ್ನುವುದು ಆಧುನಿಕ ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಮತ್ತೆ ಮತ್ತೆ ಸಾಬೀತಾಗಿದೆ. ರಾಜಕೀಯ ಸಂಕಲ್ಪಶಕ್ತಿಯನ್ನು ಜನಸಾಮಾನ್ಯರೂ ಕಳೆದುಕೊಳ್ಳುವುದು ಅಥವಾ ಪ್ರಕಟಪಡಿಸದಿರುವುದು ನಿಜಕ್ಕೂ ಆತಂಕಕಾರಿ. ಕಾವೇರಿ ಬಿಕ್ಕಟ್ಟು ತಲೆದೋರಿದ ಸಂದರ್ಭದಲ್ಲಿ ವಿರೋಧ ಪಕ್ಷಗಳು ಹುಯಿಲೆಬ್ಬಿಸುವುದು ಹಾಗೂ ಆಡಳಿತ ಪಕ್ಷಗಳು ಹುತಾತ್ಮರಂತೆ ವರ್ತಿಸುವ ಪ್ರಹಸನ ಉದ್ದಕ್ಕೂ ನಡೆದೇ ಇದೆ. ಬಿಕ್ಕಟ್ಟನ್ನು ಶಮನಗೊಳಿಸುವ ನಿಟ್ಟಿನಲ್ಲಿ ಪಕ್ಷಾತೀತ ಪ್ರಯತ್ನಗಳು ಪ್ರಾಮಾಣಿಕವಾಗಿ ನಡೆದಿರುವುದು ವಿರಳ. ಈಗಿನ ಸನ್ನಿವೇಶವನ್ನೇ ನೋಡಿ. ಕೇಂದ್ರದಲ್ಲಿ ಆಡಳಿತದಲ್ಲಿರುವ ಪಕ್ಷದ ಇಪ್ಪತ್ತೈದು ಸಂಸದರು ಕರ್ನಾಟಕದಲ್ಲಿದ್ದಾರೆ. ಇಷ್ಟೂ ಸಂಸದರು ಒಕ್ಕೊರಲಿನಿಂದ ದನಿಯೆತ್ತಿ, ಪಕ್ಷ ಹಾಗೂ ಕೇಂದ್ರ ಸರ್ಕಾರದ ವೇದಿಕೆಗಳಲ್ಲಿ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯವನ್ನು ಪ್ರಸ್ತಾಪಿಸಬಹುದು. ಆ ಮೂಲಕ ರಾಜ್ಯದ ಪ್ರತಿಭಟನೆಗೆ ರಾಜಕೀಯ ಬಲವೂ ಬರುತ್ತದೆ. ದುರದೃಷ್ಟವಶಾತ್, ನಮ್ಮ ಪ್ರತಿನಿಧಿಗಳು ನಿಷ್ಠರಾಗಿರುವುದು, ಹೆದರುವುದು ಪಕ್ಷಗಳಿಗೇ ಹೊರತು ತಮ್ಮನ್ನು ಚುನಾಯಿಸಿದ ಜನರಿಗಲ್ಲ. ಇಂಥ, ದನಿ ಕಳೆದುಕೊಂಡಂಥ ಪ್ರತಿನಿಧಿಗಳನ್ನು ಎಚ್ಚರಗೊಳಿಸುವ ರಾಜಕೀಯ ಪ್ರಜ್ಞೆಯನ್ನು ನಾವು ಉಳಿಸಿಕೊಂಡಿದ್ದೇವೆಯೇ?

ಒಂದು ಸಮಾಜವಾಗಿ ಪ್ರತಿಭಟನೆಯನ್ನು ರೂಪಿಸುವಲ್ಲಿಯೂ ನಮ್ಮ ವೈಫಲ್ಯ ಸ್ಪಷ್ಟವಾಗಿ ಕಾಣಿಸುತ್ತಿದೆ. ಕಾವೇರಿ ಸಮಸ್ಯೆ ಮೂರ್ನಾಲ್ಕು ಜಿಲ್ಲೆಗಳಿಗೆ ಸೀಮಿತ ಎನ್ನುವಂತಾಗಿದೆ. ಕೃಷ್ಣೆಯ ಸಂಕಷ್ಟಕ್ಕೂ ಮೈಸೂರು–ಬೆಂಗಳೂರುಗಳ ಭಾಗದ ಜನರಿಗೂ ಸಂಬಂಧವಿಲ್ಲ ಎನ್ನುವ ಪರಿಸ್ಥಿತಿಯಿದೆ. ಈ ಪೂರ್ವಗ್ರಹಗಳನ್ನು ದಾಟಿ, ಒಂದು ಸಮಾಜವಾಗಿ ಕನ್ನಡಿಗರು ಒಗ್ಗೂಡದಿದ್ದರೆ ಪ್ರತಿ ನಿತ್ಯ ಬಂದ್ ಮಾಡಿದರೂ ಉಪಯೋಗವಿಲ್ಲ.

■ **ರಘುನಾಥ ಚ.ಹ.**